ಗ್ರಾಮಜೀವನದ ಚೆಲುವು, ಸಮೃದ್ಧಿ, ವೈವಿಧ್ಯಗಳ ಕೊಲಾಜ್‌ನಂತಿವೆ. ಗ್ರಾಮಜೀವನದ ಮಿತಿಗಳ ನಡುವೆಯೂ ಸಹಜವಾಗಿ ಹಾಸುಹೊಕ್ಕಾದ ಬಹುತ್ವವನ್ನು 'ಮಳೆ' ಪ್ರಬಂಧಗಳು ಕಾಣಿಸುತ್ತಿವೆ.

ಗ್ರಾಮಭಾರತದ ಮಳೆ 'ನಗರಭಾರತ'ಕ್ಕೆ ಸಂಬಂಧಿಸಿದಂತೆ ಹೇಗಿರುತ್ತದೆ? ಬಹುಶಃ, ಮಳೆಯ ನಗರೀಕರಣ ಸೂರ್ಯಕೀರ್ತಿ ಅವರ ಮುಂದಿನ ಪ್ರಬಂಧಗಳಿಗೆ ದ್ರವ್ಯವಾಗಬಹುದು.

**ಮಳೆ ಪ್ರಬಂಧಗಳು; ಲೇ: ಸೂರ್ಯಕೀರ್ತಿ; ಪು: 62; ಬೆ: ರೂ. 100; ಪ್ರ: ಮಿಂಚುಳ್ಳಿ ಪ್ರಕಾಶನ, ಶಿವಮೊಗ್ಗ. ಫೋನ್: 9591367320**

---

# ಬಯಲು ದೀಪ

ರಂಗಭೂಮಿ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವ ಮೈಸೂರಿನ ದಿನಮಣಿ ಬಿ.ಎಸ್. ಅವರ ಎರಡನೇ ಕವನಸಂಕಲನ 'ಬಯಲು ದೀಪ.'

'ಬಯಲು ದೀಪ' ಸಂಕಲನದ ಬಹುತೇಕ ಕವಿತೆಗಳಲ್ಲಿ ಸಮಾನತೆಯನ್ನು ಹಂಬಲಿಸುವ ಹೆಣ್ಣಿನ ಧ್ವನಿ ಅನುರಣಿಸುತ್ತದೆ. ಸಂಕಲನದ ಶೀರ್ಷಿಕೆಯೂ ಆದ 'ಬಯಲು ದೀಪ' ಕವಿತೆಯಲ್ಲಿ ವಿಮಾನ ಹಾರಿಸುವ, ರಾತ್ರಿ ಪಾಳಿಯಲ್ಲಿ ದುಡಿಯುವ, ಗಡಿ ಕಾಯುವ ದಿಟ್ಟ ಮಹಿಳೆಯಿದ್ದಾಳೆ. ಬಯಲಿನಲ್ಲಿ ದೀಪದಂತೆ ಬೆಳಗುತ್ತಿರುವ ಈ ಹೆಣ್ಣು ಮನೆಯ ಚೌಕಟ್ಟಿಗೆ ಮರಳಿದರೆ ಎಂಜಲು ಪಾತ್ರೆಗಳು, ಮನೆಗೆಲಸ ಕಾದಿದೆ. ಹೆಣ್ಣ ಮೇಲಿನ ನಿರಂತರ ಹಿಂಸೆ, ಅತ್ಯಾಚಾರಗಳು ಪುರುಷಪ್ರಧಾನ ಸಮಾಜದ ಸಂವೇದನಾರಾಹಿತ್ಯ ಸ್ಥಿತಿಯನ್ನು ಸೂಚಿಸುವಂತಿವೆ. ಚಂದ್ರನ ತೋರಿಸಿ ಮಗುವಿಗೆ ಉಣಿಸುವುದಕ್ಕಷ್ಟೇ ಸೀಮಿತವಾಗದೆ, ಚಂದ್ರನ ಮುಟ್ಟಿ ಬಂದರೂ ಮುಟ್ಟಿನ ಹೆಸರಿನಲ್ಲಿ ಹೆಣ್ಣನ್ನು ಮೂಲೆಗುಂಪಾಗಿಸುವ ಪ್ರವೃತ್ತಿಯನ್ನು ಕವಿತೆ ತಣ್ಣನೆ ದನಿಯಲ್ಲಿ ಪ್ರಶ್ನಿಸುತ್ತದೆ. 'ಬಯಲು ದೀಪ' ಕವಿತೆಯ ಮುಂದುವರಿಕೆಯ ರೂಪದಲ್ಲಿ ನೋಡಬಹುದಾದ 'ಅಮ್ಮನಿಗೆ ರಜೆ ಇಲ್ಲ' ಕವಿತೆ, 'ಭಾನುವಾರ ಬಂದರೂ / ಜಗವ ರೋಗ ತಿಂದರೂ / ತಾನು ಬಳಲಿ ಬೆಂದರೂ / ಅಡುಗೆ ಮನೆಗೆ ಬಿಡುವಿಲ್ಲ / ಅಮ್ಮನಿಗೆ ರಜೆ ಇಲ್ಲ' ಎನ್ನುತ್ತದೆ. ಈ ಕವಿತೆ ಹೆಣ್ಣಿನ ಜಗತ್ತು ಯಥಾಸ್ಥಿತಿಯಲ್ಲಿ ಉಳಿದಿರುವುದನ್ನು ಸಹೃದಯರ ಗಮನಕ್ಕೆ ತರುತ್ತದೆ.




'ಗುಬ್ಬಿಯಳಲು' ಸಂಕಲನದ ಯಶಸ್ವಿ ಕವಿತೆಗಳಲ್ಲೊಂದು. 'ಹಿಡಿದು ಬಡಿದು ಕೊಲ್ಲಲಿಲ್ಲ / ನುಡಿ ನುಡಿದು ಕೊಂದರೆನ್ನ / ನುಡಿ ನುಡಿದೇ ಕೊಂದರು' ಎಂದು ಆರಂಭವಾಗುವ ಕವಿತೆ, ಮೊಬೈಲ್ ತರಂಗಗಳು ಗುಬ್ಬಿಗಳ ಅಸ್ತಿತ್ವಕ್ಕೆ ಸಂಚಕಾರ ತಂದಿರುವುದನ್ನು ಚಿತ್ರಿಸಿದರೂ, ಮಾತು ಆಯುಧದ ರೂಪದಲ್ಲಿ ಹಿಂಸೆ ಸೃಷ್ಟಿಸಲು ಬಳಕೆಯಾಗುತ್ತಿರುವ ವರ್ತಮಾನವನ್ನು ನೆನಪಿಸುವಂತಿದೆ. 'ನುಡಿ ನುಡಿದೇ ಕೊಂದರು' ಎನ್ನುವ ಮಾತಿನ ಧ್ವನಿ ಸಹೃದಯರ ಮನಸ್ಸಿನಲ್ಲಿ ವಿಷಾದದ ತರಂಗಗಳನ್ನು ಹುಟ್ಟಿಸುವಷ್ಟು ಶಕ್ತವಾದುದು.

ಶಿಲ್ಪ, ಲಯ ಹಾಗೂ ಸರಳತೆಯನ್ನು ಗುಣವಾಗುಳ್ಳ ಭಾಷೆಯ ಮೂಲಕ 'ಬಯಲು ದೀಪ' ಸಂಕಲನದ ಕವಿತೆಗಳು ಗಮನಸೆಳೆಯುತ್ತವೆ. ಸೂಚ್ಯವಾಗಿ ಹೇಳುವುದು, ಧ್ವನಿಶಕ್ತಿಗೆ ಒತ್ತು ನೀಡುವುದು ಸಾಧ್ಯವಾದರೆ ದಿನಮಣಿ ಅವರ ಕವಿತೆಗಳ ಹೊಳಪು ಮತ್ತಷ್ಟು ಹೆಚ್ಚಬಹುದು.

**ಬಯಲು ದೀಪ; ಲೇ: ದಿನಮಣಿ; ಪು: 96; ಬೆ: ರೂ. 120; ಪ್ರ: ಸಂಸ್ಕೃತಿ ಬುಕ್ ಏಜೆನ್ಸೀಸ್, ಮೈಸೂರು. ಫೋನ್: 9945966979**